ಒಳ್ಳೆಯವನು. ನಂಗೆ ಅವನು ತುಂಬಾ ಇಷ್ಟ. I think I've made a right decision. What do you say? ಎಂದು ನನ್ನನ್ನು ತಬ್ಬಿ ನನ್ನನ್ನೊಮ್ಮೆ ಗಿರಿಗಿಟ್ಟಲೆ ಆಡಿಸಿ ಕುರ್ಚಿಯಲ್ಲಿ ಕೂರಿಸಿದಳು. ಆದರೆ ಅವಳಿಗೆ ನಾನವಳಷ್ಟೇ ಸಂತೋಷದಿಂದಿಲ್ಲ ಎಂದು ತಿಳಿಯಿತು. 'ಮಮ್ಮಿ, ಏನಾಯ್ತು? ರೋಜರ್ ಇಷ್ಟ ಇಲ್ವಾ ನಿಂಗೆ? ಅವನು ಈ ದೇಶದವನು ಅಂತ ಕೋಪಾನಾ? ಏನ್ಮಾಡೋದು, ನಂಗೆ ನಿನ್ ಹಾಗೇ ಇದು ನನ್ ದೇಶ ಅಲ್ಲಾ ಅಂತ ಅನಿಸಲ್ಲ. ಇಲ್ಲಿರೋ ಜನ ನಂಗಿಂತ ಬೇರೆ ಅಥವಾ ನಾನವರಿಗಿಂತ ಬೇರೆ ಅಂತ ಅನ್ನಿಸಲ್ಲಾ. ಏನ್ಮಾಡಲೀ?'

ಪಾಪ! ಅವಳ ಗೊಂದಲ ನೋಡಿ ಪಿಚ್ಚೆನಿಸಿ ಅವಳನ್ನು ಹತ್ತಿರ ಕರೆದೆ. 'ನೋಡು ಸಂಯುಕ್ತಾ, ನೀನೀಗ ಮದುವೆಯಾಗ್ತಾ ಇದೀಯಾ. ಒಂದೇ ಒಂದು ಬಾರಿ ಮದುವೆಗೆ ಮುನ್ನ ಭಾರತಕ್ಕೆ ಹೋಗಿ ಬರೋಣವೇ? ನಿನ್ನಪ್ಪನನ್ನು ನನಗಾಗಿ ಒಪ್ಪಿಸುವೆಯಾ?' ಸಂಯುಕ್ತಾ ನನ್ನ ಕಡೆ ನೋಡಿ ಒಂದು ಕ್ಷಣ ಯೋಚಿಸಿ, 'ನಿನಗೆ ಸಂತೋಷವಾಗುವುದಾದರೆ, ಮೂರು ವಾರ ಅಷ್ಟೇ. ಅದಕ್ಕಿಂತ ಜಾಸ್ತಿ ಇಲ್ಲ. ನೀನು ಅಲ್ಲೇ ಇರ್ತೀನಿ ಅನ್‌ಬಾರ್ದು. ನಂಜೊತೆ ಬಂದ್ಬಿಡ್ಬೇಕು. ಹಾಗಾದ್ರೆ ಬರ್ತೀನಿ.... ಬಟ್...' 'ಬಟ್? ಬೇಡ ಅನ್ನಬೇಡ್ವೇ.' 'ಬಟ್ ಮಮ್ಮಿ, ಅಲ್ಲಿ ನಾನು ಇಲ್ಲಿ ತರಾನೇ ಇರ್ಬಹುದಾ? ಅಂದ್ರೇ.... I mean... I mean.... may be I've to adjust a bit. Ok. No problem. ಹೋಗೋಣ. ನಾನು, ನೀನು ಇಂಡಿಯಾಗೆ ಹೋಗೋಣ. ಒಪ್ಪಿದೆ '.

* * *

ಅಮ್ಮನ ಸಂತೋಷಕ್ಕಾಗಿ ಒಪ್ಪಿಕೊಂಡಿದ್ದೆ. ಬುದ್ಧಿ ತಿಳಿದಾಗಿನಿಂದ ನಾನು ಭಾರತಕ್ಕೆ ಹೋಗಿಲ್ಲ. ಅದರ ಬಗ್ಗೆ ಕೇಳಿ ಬೆಳೆದಿದ್ದೇನೆ. ಮಮ್ಮಿ ಯಾವಾಗಲೂ ನಮ್ಮ ದೇಶ, ನಮ್ಮ ಸಂಸ್ಕೃತಿ ಎಂದೆಲ್ಲ ಹೇಳುವಾಗ ಗೊಂದಲವುಂಟಾಗುತ್ತಿತ್ತು. ಆಗೆಲ್ಲ ಡ್ಯಾಡ್ ಹತ್ತಿರ ಹೋಗಿ ನಾನು ಇಂಡಿಯನ್ನಾ ಅಥವಾ ಅಮೆರಿಕನ್ನಾ ಎಂದು ಕೇಳುತ್ತಿದ್ದೆ. ಅದಕ್ಕೆ ಡ್ಯಾಡ್, ನಿಂಗೇನನಿಸುತ್ತೆ? ಎಂದು ನನ್ನನ್ನೇ ಮರುಪ್ರಶ್ನೆ ಮಾಡುತ್ತಿದ್ದರು. ನನಗೂ ಆಗ ಸ್ಪಷ್ಟವಾದ ಉತ್ತರ ಕೊಡಲಿಕ್ಕಾಗುತ್ತಿರಲಿಲ್ಲ. ಬೆಳೆಯುತ್ತಾ ಬೆಳೆಯುತ್ತಾ ಮಮ್ಮಿಯ ಮಾತುಗಳಿಗೆ ಕಿವುಡಾಗುತ್ತಾ ಹೋದೆ. ಏಕೆಂದರೆ ಅದು ನನಗೆ ಅವಶ್ಯಕವಾಗಿತ್ತು. ಅವಶ್ಯಕತೆಯ ಬದುಕು ಸ್ವಾಭಾವಿಕವಾಗುತ್ತಾ ಹೋಯಿತು. ಭಾರತ ಮರೆಯುತ್ತಾ ಹೋಯಿತು. ಅಮೆರಿಕದ ಮನೆಯಲ್ಲಿ ಭಾರತದ ಊಟ ಮಾಡುತ್ತಿದ್ದೆ. ಆದರೆ ಯಾವತ್ತೂ ಭಾರತದ ಸಂಸ್ಕೃತಿ ಅಥವಾ ಅದರ ಕಟ್ಟುಪಾಡುಗಳು ನನ್ನ ಬದುಕಿಗೆ ಅಡ್ಡಿಯಾಗಲಿಲ್ಲ. ಈಗ ಭಾರತಕ್ಕೆ ಹೋಗುವ ಅವಕಾಶ ದೊರೆತಿದೆ. ನೋಡೋಣ ನನ್ನ ಕಲ್ಪನೆಯ ಭಾರತ, ಮಮ್ಮಿಯ ಹೆಮ್ಮೆಯ ಭಾರತ ಹೇಗಿದೆ ಅಂತ. ನನ್ನ ಪಕ್ಕದ ಸೀಟಿನಲ್ಲಿ ಕುಳಿತು ಮಗುವಿನಂತೆ ನಿದ್ದೆ ಮಾಡುತ್ತಿದ್ದ ಮಮ್ಮಿಯನ್ನು ನೋಡಿದೆ. ಮುಖದಲ್ಲಿ ತೃಪ್ತಿಯ ನಗೆ ಮೂಡಿತ್ತು. ತಾಯಿಯ ಬೆಚ್ಚನೆಯ ಮಡಿಲಲ್ಲಿ ತೃಪ್ತಿಯಿಂದ ನಿದ್ದೆಹೋದ ಮಗುವಿನಂತೆ ಮಲಗಿದ್ದಳು, ಮಮ್ಮಿ. ನನ್ನ ನಿದ್ರೆ ಕೆಡಿಸಿ ತಾವು ನೆಮ್ಮದಿಯಿಂದ ಮಲಗಿದ್ದಾರೆ ಎನ್ನಿಸಿ ಸ್ವಲ್ಪ ಅಸಮಾಧಾನವಾಯಿತು. ಮಮ್ಮಿಯ ಅಣ್ಣನ ಮಗಳ ಮದುವೆ. ಶರ್ಮಿಳಾಳ ಫೋಟೋ ತೋರಿಸಿ ಹೇಳಿದ್ದರು, ನಿನಗಿಂತ ಎರಡು ವರ್ಷ ಚಿಕ್ಕವಳು. ಚಿಕ್ಕವರಿದ್ದಾಗ ನೀನು ಅವಳು ಒಟ್ಟಿಗೆ ಆಟವಾಡುತ್ತಿದ್ದಿರಿ. ತುಂಬಾ ಜಗಳ ಕಾಯುತ್ತಿದ್ದರಿ, ಅಂತ. ನಾವು ರಜೆ ಮುಗಿದು ಅಮೆರಿಕಗೆ ಹೋಗೋ ಹೊತ್ತಿಗೆ ಶರ್ಮಿಳಾ ಅಮೆರಿಕನ್ ಆಕ್ಸೆಂಟ್‌ನಲ್ಲಿ ಇಂಗ್ಲಿಷ್ ಮಾತನಾಡಲು ಪ್ರಾರಂಭಿಸಿಬಿಡುತ್ತಿದ್ದಳು. ಹಾಗೂ ನಾನೂ ಬಹಳಷ್ಟು ಕನ್ನಡ ಪದಗಳನ್ನು ಕಲಿತುಬಿಟ್ಟಿರುತ್ತಿದ್ದೆ ಎಂದು ಹೇಳಿದ್ದರು, ಮಮ್ಮಿ. ಈಗ ಅವಳ ಮದುವೆ. ಮದುವೆ ಎಂದರೆ ಭಾರತದಲ್ಲಿ ಬಹಳ ಸಂಭ್ರಮ. ಒಂದು ವಾರದ ಹಿಂದೆಯೇ ಶಾಸ್ತ್ರಗಳೆಲ್ಲಾ ಪ್ರಾರಂಭವಾಗುತ್ತವೆ ಎಂದೆಲ್ಲಾ ಮಮ್ಮಿ ಮದುವೆ ಬಗ್ಗೆ ತುಂಬಾ ಮಾತನಾಡಿದ್ದರು. ಎಲ್ಲ ದೇಶದಲ್ಲೂ ಮದುವೆ ಎಂದರೆ ವಿಶೇಷವೇ. ಅದು ಹೇಗೆ ಆಗಲೀ, ಹುಡುಗ ಹುಡುಗಿ ಒಬ್ಬರನ್ನೊಬ್ಬರು ಒಪ್ಪಿ ಮದುವೆಯಾದರೂ ಸರಿ, ಭಾರತದ ಹಾಗೆ ತಂದೆತಾಯಿಗಳು ಹುಡುಕಿ ಮದುವೆ ಮಾಡಿದರೂ ಸರಿ. ಹೀಗೆಲ್ಲಾ ಏನೇನೋ ಯೋಚಿಸುತ್ತಾ, ಅಲ್ಲಿ ಯಾರೆಲ್ಲ ಇರಬಹುದು, ಅವರೆಲ್ಲಾ ಏನೇನು ಮಾತನಾಡಿಸಬಹುದು. ಸದ್ಯ ಮಮ್ಮಿ ನನಗೆ ಕನ್ನಡ ಕಲಿಸಿದ್ದು ಸಾರ್ಥಕವಾಯಿತು. ನಾನವರೊಡನೆ ಕನ್ನಡ ಮಾತನಾಡಬಹುದು. ಭಾರತದಲ್ಲಿ people get very personal ನಮಗೇ